73212

Sl.No.

MA-5969

Total No. of Pages : 3

ನಾಲ್ಕನೆಯ ಚತುರ್ಮಾಸ ಬಿ.ಎಸ್ಸಿ./ಬಿ.ಸಿ.ಎ. ಪರೀಕ್ಷೆ,
ಸೆಪ್ಟೆಂಬರ್/ಅಕ್ಟೋಬರ್ – 2022
(ಚತುರ್ಮಾಸ ಸ್ಕೀಮ್ : ಸಿಬಿಸಿಎಸ್)
**(Freshers of April/May 2020 & Onwards)**
ಕನ್ನಡ ಭಾಷೆ (ಪತ್ರಿಕೆ – ೪)
ವಿಜ್ಞಾನ ಗಂಗೋತ್ರಿ – ೪ : ಕಾವ್ಯಭಾಗ ಮತ್ತು ಭಾಷಾಭಾಗ

ಸಮಯ: 3 ಗಂಟೆಗಳು | ಗರಿಷ್ಠ ಅಂಕಗಳು : 80

ಕಾವ್ಯಭಾಗ (50 ಅಂಕಗಳು)

ಪ್ರ1) ಅ) ಒಂದು ಪದ್ಯಭಾಗದ ಭಾವವನ್ನು ಸಂದರ್ಭ ಸಹಿತ ವಿವರಿಸಿ: [5]

೧) ಮೃಗಯಾವ್ಯಾಜದಿನೊರ್ಮೆ ಶಂತನು ತೊಳಲ್ತರ್ಪಂ ಪಳಂಚಲ್ಕೆ ತ
ನ್ಮೃಗಶಾಬಾಕ್ಷಿಯ ಕಂಪು ತಟ್ಟೆ ಮಧುಪಂಬೋಲ್ ಸೋಲ್ತು ಕಂಡೊಲ್ದುನ
ಲ್ಮೆಗೆ ದಿಬ್ಯಂಪಿಡಿವಂತೆವೋಲ್ ಪಿಡಿದು ನೀಂ ಬಾಮೋಪಮೆಂದಂಗೆ ಮೆ
ಲ್ಲಗೆ ತತ್ಕನ್ಯಕೆ ನಾಣ್ಚಿ ಬೇಡುವೊಡೆ ನೀವೆಮಯ್ಯನಂ ಬೇಡಿರೇ.

೨) ದೇವಿಯರ ಪರಕೆಯಿಂದೆನ
ಗಾವುದಱೊಳ್ ಕೊರತೆಯಿಲ್ಲ ಪೋದಿರುಳೊಳ್ ಪೊಂ
ದಾವರೆ ಕೊಳದಂಚೆ ಕವಿ
ಲ್ದಾವರೆ ಗೊಳದೊಳಗೆ ನಲಿವ ಕನಸಂ ಕಂಡೆಂ

ಆ) ಒಂದು ವಾಕ್ಯದಲ್ಲಿ ಉತ್ತರಿಸಿ: [5×1=5]

೧) ಜನೋದಯ ರಾಜನು ಮೊದಲನೆ ಗಿಳಿಯನ್ನು ಯಾವ ಊರಿನಲ್ಲಿ ಕಂಡನು?

೨) ಸತ್ಯವತಿಯ ತಂದೆಯು ಶಂತನು ಮಹಾರಾಜನಿಗೆ ವಿಧಿಸಿದ್ದ ಷರತ್ತು ಯಾವುದು?

೩) ದ್ರೌಪದಿಗೆ ಅಗ್ನಿಪುತ್ರಿಯೆಂಬ ಹೆಸರು ಬರಲು ಕಾರಣವೇನು?

೪) ಯಶೋಧರನ ತಾಯಿಯ ಹೆಸರೇನು?

೫) ಕರ್ಣನ ಬಳಿಗೆ ದಾನ ಕೇಳಲು ಬಂದ ವೆಂಕಟೇಶಯ್ಯ ಏನನ್ನು ಕೇಳಿದನು?

***P.T.O.***

https://www.uomonline.com

ಪ್ರ2) ಮೂರು ವಾಕ್ಯಗಳನ್ನು ಸಂದರ್ಭ ಸಹಿತ ವಿವರಿಸಿ: [3×4=12]

೧) ನೀಂ ವ್ಯಾಕುಲನಲ್ಲದೆ ಬಂದು ಪಿಡಿದು ಕೇಳ್ಗೀ ಧನಮಂ

೨) ಭಕ್ತಿಯ ಭವ ಸನ್ನಿಧಿಯೊಳ್ ರೂಪುಗೊಂಡತಿರ್ದಳ್

೩) ಬಾಂದೊರಜೆಯ ಮಗಂ ಯಾರೆ ಸಂಧಿಯಾದಪುದೆನು ಮಱುಗದಿರ್

೪) ಪಗಲೊಗೆವಿಂದುವಿನಂತಾಯ್ತು ನಿನ್ನ ಮಂಗಲ ವದನಂ

೫) ದಾನಶೂರ್ನ ಹೆಸರಲ್ಲೊಂದು ಹೂಟ ಹೂಡ್ಬೇಕು.

ಪ್ರ3) ಎರಡು ವಿಷಯಗಳನ್ನು ಕುರಿತು ಟಿಪ್ಪಣಿ ಬರೆಯಿರಿ: [2×2=4]

ಅ) ದುರ್ಗಸಿಂಹ, ಪರಾಶರ, ಜೀವದಯ, ಮಾರಿಮಳೆ.

ಆ) ಒಂದು ವಿಷಯ ಕುರಿತು ಸ್ವಂತ ಅಭಿಪ್ರಾಯವನ್ನು.ಬರೆಯಿರಿ: [4]

೧) ಬೇಡರ ಮನೆಯ ಪಂಜರದ ಗಿಳಿ.

೨) ಜೀವದಯೆ ಮತ್ತು ಜೈನಧರ್ಮ.

ಪ್ರ4) ಒಂದು ಪ್ರಶ್ನೆಗೆ ಉತ್ತರಿಸಿ: [10]

೧) ಎರಡು ಗಿಣಿಗಳ ಕಥೆಯಲ್ಲಿ 'ಸರಿಸರ್ಗವಶದಿಂ ದೋಷ ಗುಣಂಗಳಹವು' – ಎಂಬ ಮಾತು ಹೇಗೆ ನಿರೂಪಿತಗೊಂಡಿದೆ?

೨) ಅಹಿಂಸೆಯ ಮಹತ್ತ್ವವನ್ನು ಜನ್ನ ಕವಿಯು ಕಾವರೆ ರಣೆಗೊಳ್ವೊಡಚ್ಚೆ ಬಾರಿಪರೊಳರೇ' ಕಾವ್ಯಭಾಗದಲ್ಲಿ ಚಿತ್ರಿಸಿರುವ ಬಗೆಯನ್ನು ವಿವರಿಸಿ.

ಪ್ರ5) ಎರಡು ಪ್ರಶ್ನೆಗಳಿಗೆ ಉತ್ತರಿಸಿ: [2×5=10]

೧) ಶಂತಸು ಸತ್ಯವತಿಯನ್ನು ಭೇಟಿಯಾದ ಪ್ರಸಂಗವನ್ನು ಕುರಿತು ಬರೆಯಿರಿ.

೨) ದ್ರೌಪದಿಯ ಮನದ ಸಂಶಯವನ್ನು ಭೀಮನು ಹೇಗೆ ಕಳೆದನು? ವಿವರಿಸಿ.

೩) ಕರ್ಣನ ದಾನಶೂರ ಗುಣವನ್ನು ಜನಪದರು ಹೇಗೆ ಕಟ್ಟಿಕೊಟ್ಟಿದ್ದಾರೆ? ವಿವರಿಸಿ.

೪) ಚಂದ್ರಾಪೀಡನು ಮಹಾಶ್ವೇತೆಯನ್ನು ಕಂಡ ಪ್ರಸಂಗವನ್ನು ತಿಳಿಸಿ.



https://www.uomonline.com

73212

MA-5969

ಭಾಷಾ ಭಾಗ (30 ಅಂಕಗಳು)

ಪ್ರ6) ಒಂದು ಪ್ರಶ್ನೆಗೆ ಉತ್ತರಿಸಿ: [10]

೧) ಸರ್ಕಾರಿ ಪತ್ರ ಎಂದರೇನು? ಸರ್ಕಾರಿ ಪತ್ರದ ಅಂಗಗಳು ಯಾವುವು? ಅಧಿಕೃತ ಪತ್ರದ ಮಾದರಿಯನ್ನು ಬರೆಯಿರಿ.

೨) ಪ್ರಬಂಧ ಎಂದರೇನು? ಪ್ರಬಂಧ ರಚನೆಯ ಹಂತಗಳನ್ನು ಕುರಿತು ಬರೆಯಿರಿ.

ಪ್ರ7) ಒಂದು ಪ್ರಶ್ನೆಗೆ ಉತ್ತರಿಸಿ: [10]

೧) ಪ್ರಚಾರ ಮಾಧ್ಯಮಗಳು ಯಾವುವು? ಅವುಗಳನ್ನು ಕುರಿತು ಬರೆಯಿರಿ.

೨) ವರದಿ ಎಂದರೇನು? ವಿಧಗಳು ಮತ್ತು ಲಕ್ಷಣ ಸ್ವರೂಪವನ್ನು ತಿಳಿಸಿ.

ಪ್ರ8) ಎರಡು ವಿಷಯಗಳನ್ನು ಕುರಿತು ಸಂಕ್ಷಿಪ್ತವಾಗಿ ಉತ್ತರಿಸಿ: [2×5=10]

೧) ಡಿಜಿಟಲ್ ಕನ್ನಡ

೨) ಲಲಿತ ಪ್ರಬಂಧಗಳು

೩) ಅಭ್ಯರ್ಥನ ಪತ್ರ

೪) ವೈಯಕ್ತಿಕ ಪತ್ರ

ಅಅ ಬಬ

https://www.uomonline.com
Whatsapp @ 9300930012
Send your old paper & get 10/-
अपने पुराने पेपर्स भेजे और 10 रुपये पायें,
Paytm or Google Pay से